ವಿಜಯವಾಣಿ
● VIJAYAVANI » MANGALURU
ಸೋಮವಾರ 15 ನವೆಂಬರ್ 2021
15 NOVEMBER 2021

# ಮಣಿಪಾಲ-ಅಜ್ಜರಕಾಡು ಸೈಕಲ್ ಜಾಥಾ

**ಉಡುಪಿ:** ವಿಶ್ವ ಮಧುಮೇಹ ದಿನದ ಅಂಗವಾಗಿ ನ.14ರಂದು ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಂತಃಸ್ರಾವಶಾಸ್ತ್ರ (ಎಂಡೋ ಕ್ರೈನೊಲೊಜಿ) ವಿಭಾಗ ವತಿಯಿಂದ ಸೈಕಲ್ ಜಾಥಾ ನಡೆಯಿತು.

ಮಣಿಪಾಲ ಮಾಹೆ ಸಹ ಕುಲಾಧಿಪತಿ ಡಾ. ಎಚ್.ಎಸ್.ಬಲ್ಲಾಳ್ ಕಸ್ತೂರ್ಬಾ ಆಸ್ಪತ್ರೆ ಹೊರರೋಗಿ ವಿಭಾಗದ ಮುಂಭಾಗ ಸೈಕಲ್ ಜಾಥಾಕ್ಕೆ ಚಾಲನೆ ನೀಡಿದರು. ಮಣಿಪಾಲದಿಂದ ಆರಂಭವಾದ ಜಾಥಾ ಸಿಂಡಿಕೇಟ್ ಸರ್ಕಲ್, ಸಿಟಿ ಬಸ್ ನಿಲ್ದಾಣ, ಬನ್ನಂಜೆ, ಕರಾವಳಿ ಸರ್ಕಲ್, ಅಂಬಲಪಾಡಿ, ಬ್ರಹ್ಮಗಿರಿ ಮೂಲಕ ಅಜ್ಜರಕಾಡು ಕ್ರೀಡಾಂಗಣದಲ್ಲಿ ಸಮಾಪನಗೊಂಡಿತು. 500ಕ್ಕೂ ಹೆಚ್ಚು ಜನರು ಜಾಥಾದಲ್ಲಿ ಭಾಗವಹಿಸಿದ್ದರು.

**ಸಮಾರೋಪ:** ಅಜ್ಜರಕಾಡು ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಡಾ. ಎಚ್.ಎಸ್. ಬಲ್ಲಾಳ್, ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಜೀವನದ ಮೌನ ಕೊಲೆಗಾರರು. ಸಾಮಾನ್ಯ ಜನರಿಗೆ ರೋಗದ ತೀವ್ರತೆ ಅರ್ಥವಾಗುವುದಿಲ್ಲ. ಬಹಳ ಮುಖ್ಯವಾಗಿ ಶೇ.50ರಷ್ಟು ಮಧುಮೇಹ ರೋಗಿಗಳಿಗೆ ಆರಂಭಿಕ ಹಂತದಲ್ಲಿ ರೋಗ ಪತ್ತೆ ಆಗಿರುವುದಿಲ್ಲ. ಮಧುಮೇಹ ದೇಹದ ಎಲ್ಲ ಭಾಗಗಳ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಆರಂಭಿಕ ಹಂತದಲ್ಲಿ ರೋಗ ಪತ್ತೆ ಮುಖ್ಯ ಎಂದರು.


ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಡಾ.ರೋಶನ್ ಶೆಟ್ಟಿ ಮಾತನಾಡಿ, ಕ್ರೀಡಾಂಗಣಕ್ಕೆ ಬಹಳಷ್ಟು ಜನರು ಬೇರೆ ಬೇರೆ ದೈಹಿಕ ವ್ಯಾಯಾಮಕ್ಕಾಗಿ ಬರುತ್ತಾರೆ. ಇದರಲ್ಲಿ ಹೆಚ್ಚಿನವರು 40 ವರ್ಷ ದಾಟಿದವರು. ಆದರೆ ಮಧುಮೇಹ ಮತ್ತು ಹೃದಯ ಸಂಬಂಧಿ ಕಾಯಿಲೆ ತುಂಬಾ ಸಣ್ಣ ವಯಸ್ಕರಲ್ಲಿಯೂ ಕಂಡು ಬರುತ್ತಿವೆ. ಮಕ್ಕಳಿಗೆ ಮತ್ತು ಯುವಕರಿಗೆ ದೈಹಿಕ ವ್ಯಾಯಾಮ ಇಲ್ಲದಿರುವುದು ಮುಖ್ಯ ಕಾರಣ ಎಂದರು.

ಸಹ ಕುಲಪತಿ ಡಾ.ಪಿ.ಎಲ್.ಎನ್.ಜಿ. ರಾವ್, ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ ಡೀನ್ ಡಾ. ಅರುಣ್ ಮಯ್ಯ, ಕೆಎಂಸಿ ಡೀನ್ ಡಾ. ಶರತ್ ಕೆ. ರಾವ್, ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ ಮುತ್ತಣ್ಣ, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಮತ್ತು ಅಂತಃಸ್ರಾವಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಸಹನಾ ಶೆಟ್ಟಿ ಉಪಸ್ಥಿತರಿದ್ದರು.

15-11-2021
UDAYAVANI - MANIPAL

# ಮಧುಮೇಹ ಜಾಗೃತಿಗೆ ಸೈಕ್ಲಾತಾನ್

ಉಡುಪಿ, ನ. 14: ಮಧುಮೇಹ ದಿನದ ಅಂಗವಾಗಿ ನ. 14ರಂದು ಮಣಿಪಾಲ ಕೆಎಂಸಿ ಮತ್ತು ಆಸ್ಪತ್ರೆಯ ಅಂತಃಸ್ರಾವಶಾಸ್ತ್ರ(ಎಂಡೋಕ್ರೈನೊಲೊಜಿ) ವಿಭಾಗದಿಂದ ಸೈಕಲ್ ಜಾಥಾ ನಡೆಯಿತು.




**ಉಡುಪಿ: ಸೈಕಲ್ ಜಾಥಾ ಸಮಾರೋಪ ಸಮಾರಂಭದಲ್ಲಿ ಮಾಹೆ ಸಹ ಕುಲಾಧಿಪತಿ ಡಾ। ಎಚ್.ಎಸ್.ಬಲ್ಲಾಳ್ ಮಾತನಾಡಿದರು.**

ಮಾಹೆ ಸಹ ಕುಲಾಧಿಪತಿ ಡಾ। ಎಚ್.ಎಸ್.ಬಲ್ಲಾಳ್ ಅವರು ಕಸ್ತೂರ್ಬಾ ಆಸ್ಪತ್ರೆ ಬಳಿ ಸೈಕಲ್ ಜಾಥಾಕ್ಕೆ ಚಾಲನೆ ನೀಡಿದರು. ಮಣಿಪಾಲದಿಂದ ಹೊರಟ ಜಾಥಾವು, ಉಡುಪಿ, ಕರಾವಳಿ ಸರ್ಕಲ್, ಅಂಬಲಪಾಡಿ, ಬ್ರಹ್ಮಗಿರಿ ಮೂಲಕ ಅಜ್ಜರಕಾಡು ಕ್ರೀಡಾಂಗಣದವರೆಗೆ ನಡೆಯಿತು. ಸೈಕಲ್ ಜಾಥಾದಲ್ಲಿ ಸುಮಾರು 500ಕ್ಕೂ ಹೆಚ್ಚು ಜನರು ಸೈಕಲ್‌ನೊಂದಿಗೆ ಭಾಗವಹಿಸಿದ್ದರು.

ಸಮಾರೋಪದಲ್ಲಿ ಡಾ। ಎಚ್. ಎಸ್. ಬಲ್ಲಾಳ್, ಸಹ ಕುಲಪತಿ ಡಾ। ಪಿ. ಎಲ್. ಎನ್. ಜಿ. ರಾವ್, ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್ ಡೀನ್ ಡಾ। ಅರುಣ್ ಮಯ್ಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹ ನಿರ್ದೇಶಕ ಡಾ। ರೋಶನ್‌ಕುಮಾರ್ ಶೆಟ್ಟಿ, ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ್ ಶೆಟ್ಟಿ, ಮುಖ್ಯ ನಿರ್ವಹಣಾಧಿಕಾರಿ ಸಿ. ಜಿ. ಮುತ್ತಣ್ಣ, ಕೆಎಂಸಿ ಡೀನ್ ಡಾ। ಶರತ್ ಕೆ. ರಾವ್, ಅಂತಃಸ್ರಾವಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ। ಸಹಾನಾ ಶೆಟ್ಟಿ ಉಪಸ್ಥಿತರಿದ್ದರು.

04
ಮಣಿಪಾಲ
2021
U ನವೆಂಬರ್ 15 ಸೋಮವಾರ
ಉದಯವಾಣಿ
ಸುದಿನ

# ಮಣಿಪಾಲ ಆಸ್ಪತ್ರೆ: ಮಧುಮೇಹ ದಿನದ ಅಂಗವಾಗಿ ಸೈಕಲ್ ಜಾಥಾ

**ಉಡುಪಿ, ನ. 14:** ಪ್ರತೀ ವರ್ಷ ಮಧುಮೇಹ ದಿನವನ್ನಾಗಿ ನ. 14ರಂದು ವಿಶ್ವಾದ್ಯಂತ ಆಚರಿಸುವ ಹಿನ್ನೆಲೆಯಲ್ಲಿ ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಂತಃಸ್ರಾವಶಾಸ್ತ್ರ (ಎಂಡೋ ಕ್ರೈನೊಲೊಜಿ) ವಿಭಾಗವು ಸೈಕಲ್ ಜಾಥಾವನ್ನು ಆಯೋಜಿಸಿತ್ತು. ಮಧುಮೇಹ ಆರೈಕೆಯ ಸಾರ್ವತ್ರಿಕ ಲಭ್ಯತೆ, ಈಗ ಇಲ್ಲದಿದ್ದರೆ, ಯಾವಾಗ? ಎಂಬ ಈ ವರ್ಷದ ಧ್ಯೇಯ ವಾಕ್ಯದಡಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಮಾಹೆ ಸಹ ಕುಲಾಧಿಪತಿ ಡಾ। ಎಚ್. ಎಸ್.ಬಲ್ಲಾಳ್ ಅವರು ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಹೊರರೋಗಿ ವಿಭಾಗದ ಮುಂದೆ ಸೈಕಲ್ ಜಾಥಕ್ಕೆ ಚಾಲನೆ ನೀಡಿದರು. ಮಣಿಪಾಲದಿಂದ ಆರಂಭವಾದ ಜಾಥವು, ಸಿಂಡಿಕೇಟ್ ಸರ್ಕಲ್, ಸಿಟಿ ಬಸ್ ನಿಲ್ದಾಣ, ಬನ್ನಂಜೆ, ಕರಾವಳಿ ಸರ್ಕಲ್, ಅಂಬಲಪಾಡಿ, ಬ್ರಹ್ಮಗಿರಿ ಮೂಲಕ ಅಜ್ಜರಕಾಡು ಕ್ರೀಡಾಂಗಣದಲ್ಲಿ ಸಮಾಪನಗೊಂಡಿತು. ಭಾಗವಹಿಸಿದವರಿಗೆ ಕ್ರೀಡಾಂಗಣದಲ್ಲಿ ಜುಂಬಾ ಸೆಷನ್‌ಗಳನ್ನು ಆಯೋಜಿಸಲಾಗಿತ್ತು. 500ಕ್ಕೂ ಹೆಚ್ಚು ಜನರು ಸೈಕಲ್‌ನೊಂದಿಗೆ ಭಾಗವಹಿಸಿದ್ದರು.


ಮಣಿಪಾಲದಲ್ಲಿ ಸೈಕಲ್ ಜಾಥಾಕ್ಕೆ ಚಾಲನೆ ನೀಡಲಾಯಿತು.

ಅಜ್ಜರಕಾಡು ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಡಾ। ಎಚ್. ಎಸ್. ಬಲ್ಲಾಳ್, ಮಧುಮೇಹ ಮತ್ತು ಅಧಿಕ ರಕ್ತದೊತ್ತಡವು ಜೀವನದ ಮೌನ ಕೊಲೆಗಾರರಾಗಿದ್ದು ಸಾಮಾನ್ಯ ಜನರಿಗೆ ರೋಗದ ತೀವ್ರತೆ ಅರ್ಥವಾಗುವುದಿಲ್ಲ, ಬಹಳ ಮುಖ್ಯವಾಗಿ ಶೇ. 50ರಷ್ಟು ಮಧುಮೇಹ ರೋಗಿಗಳಿಗೆ ಆರಂಭಿಕ ಹಂತದಲ್ಲಿ ಪತ್ತೆ ಆಗಿರುವುದಿಲ್ಲ. ಮಧುಮೇಹವು ದೇಹದ ಎಲ್ಲ ಭಾಗಗಳ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಆರಂಭಿಕ ಹಂತದಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದರ ಅರಿವು ಮತ್ತು ರೋಗ ಪತ್ತೆ ನಡೆಯುವುದು ಮುಖ್ಯವಾಗಿದೆ ಎಂದರು.

ಕಾರ್ಯಕ್ರಮದ ಮುಖ್ಯ ಉದ್ದೇಶ ಜನರಲ್ಲಿ ಜಾಗೃತಿ ಮೂಡಿಸುವುದು, ಜೀವನಶೈಲಿ ರೋಗದಿಂದ ತಡೆಗಟ್ಟಲು ಇದು ಮುಖ್ಯವಾಗಿದೆ. ಈ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ನಾನು ತಂಡವನ್ನು ಅಭಿನಂದಿಸುತ್ತೇನೆ ಎಂದು ಸಹ ಕುಲಪತಿ ಡಾ। ಪಿ. ಎಲ್. ಎನ್. ಜಿ. ರಾವ್ ನುಡಿದರು.

ಮಧುಮೇಹ ರೋಗಿಗಳಿಗೆ ಪಾದದ ತಪಾಸಣೆ ಕೂಡ ಬಹಳ ಮುಖ್ಯ. ಮಣಿಪಾಲ ಆಸ್ಪತ್ರೆಯಲ್ಲಿ, ಮಧುಮೇಹ ಪಾದದ ಆರಂಭಿಕ ತಪಾಸಣೆ, ಮೌಲ್ಯಮಾಪನ ಮತ್ತು ನಿರ್ವಹಣೆಗೆ ವಿಶೇಷ ಘಟಕವಿದೆ. ಮಣಿಪಾಲದ ಮಧುಮೇಹ ಪಾದದ ಆರೈಕೆ ಮತ್ತು ಸಂಶೋಧನ ವಿಭಾಗದಲ್ಲಿ ವಿಶ್ವ ಮಧುಮೇಹ ದಿನಾಚರಣೆಯ ಅಂಗವಾಗಿ ನ. 15ರಿಂದ 19ರ ವರೆಗೆ ಮಧುಮೇಹಿಗಳಿಗಾಗಿ ಉಚಿತ ಪಾದದ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್ ಡೀನ್ ಡಾ। ಅರುಣ್ ಮಯ್ಯ ತಿಳಿಸಿದರು.

ಈ ಕ್ರೀಡಾಂಗಣಕ್ಕೆ ಬಹಳಷ್ಟು ಜನರು ಬೇರೆ ಬೇರೆ ದೈಹಿಕ ಚಟುವಟಿಕೆಗಳನ್ನು ಆಡಲು ಬರುತ್ತಾರೆ. ಇದರಲ್ಲಿ ಹೆಚ್ಚಿನವರು 40 ವರ್ಷ ದಾಟಿದವರು. ಆದರೆ ಮಧುಮೇಹ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ಈಗ ತುಂಬಾ ಸಣ್ಣ ವಯಸ್ಕರಲ್ಲಿ ಕಂಡು ಬರುತ್ತಿವೆ. ಇದಕ್ಕೆ ಕಾರಣ ಮಕ್ಕಳಿಗೆ ಮತ್ತು ಯುವಕರಿಗೆ ದೈಹಿಕ ಚಟುವಟಿಕೆಗಳು ಸಿಗದೇ ಇರುವುದು. ಆದ್ದರಿಂದ ಸಮಯ ಸಿಕ್ಕಾಗಲೆಲ್ಲಾ ಮಕ್ಕಳು ಮತ್ತು ಯುವಕರು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹ ನಿರ್ದೇಶಕ ಡಾ। ರೋಶನ್ ಶೆಟ್ಟಿ ಸಲಹೆ ನೀಡಿದರು.

ಅಂತಃಸ್ರಾವಶಾಸ್ತ್ರ (ಎಂಡೋ ಕ್ರೈನೊಲೊಜಿ) ವಿಭಾಗದ ಮುಖ್ಯಸ್ಥೆ ಡಾ।ಸಹನಾ ಶೆಟ್ಟಿ ಪ್ರಸ್ತಾವನೆಗೈದರು. ವೈದ್ಯಕೀಯ ಅಧೀಕ್ಷಕ ಡಾ।ಅವಿನಾಶ್ ಶೆಟ್ಟಿ ವಂದಿಸಿದರು. ಕೆಎಂಸಿ ಡೀನ್ ಡಾ। ಶರತ್ ಕೆ. ರಾವ್, ಆಸ್ಪತ್ರೆ ಮುಖ್ಯನಿರ್ವಹಣಾಧಿಕಾರಿ ಸಿ. ಜಿ. ಮುತ್ತಣ್ಣ ಉಪಸ್ಥಿತರಿದ್ದರು.

THE HINDU MANGALURU
MONDAY, NOVEMBER 15, 2021

## Cyclothon held

MANGALURU

The Department of Endocrinology of Kasturba Medical College and Hospital, Manipal, organised a cyclothon in Udupi on Sunday to observe World Diabetes Day. Speaking on the occasion the Pro Chancellor of MAHE H. S. Ballal said that diagnosing diabetes at early stage is very important to prevent the severity. Arun Maiya, Dean, Manipal College of Health Profession said that the hospital will conduct a free foot screening for diabetes patients from November 15 to 19.

THE NEW INDIAN EXPRESS
MONDAY 15.11.2021



Udupi: Over 500 enthusiasts participated in a cyclothon organised by MAHE to observe World Diabetes Day on Sunday. The cyclothon started from the OPD block of the Kasturba Hospital at 6.30 am and ended at Mahatma Gandhi District Stadium.

ವಿಜಯ ಕರ್ನಾಟಕ

ಸೋಮವಾರ, 15 ನವೆಂಬರ್ 2021,
ಮಂಗಳೂರು

# ಮಧುಮೇಹ ದಿನಾಚರಣೆ ಸೈಕಲ್ ಜಾಥಾ




**ಉಡುಪಿ:** ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಂತಃಸ್ರಾವಶಾಸ್ತ್ರ(ಎಂಡೋ ಕ್ರೈನಾಲಜಿ) ವಿಭಾಗದ ವತಿಯಿಂದ ಮಧುಮೇಹ ದಿನಾಚರಣೆ ಅಂಗವಾಗಿ ಸೈಕಲ್ ಜಾಥಾ ಹಮ್ಮಿಕೊಂಡಿದ್ದು, ಮಣಿಪಾಲ ಮಾಹೆ ಸಹ ಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್ ಚಾಲನೆ ನೀಡಿದರು.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಹೊರ ರೋಗಿ ವಿಭಾಗದ ಎದುರು ಸೈಕಲ್ ಜಾಥಾಕ್ಕೆ ಹಸಿರು ನಿಶಾನೆ ತೋರಿಸಲಾಯಿತು. ಮಣಿಪಾಲದಿಂದ ಆರಂಭವಾದ ಜಾಥಾ ಸಿಂಡಿಕೇಟ್ ಸರ್ಕಲ್, ಸಿಟಿ ಬಸ್ ನಿಲ್ದಾಣ, ಬನ್ನಂಜೆ, ಕರಾವಳಿ ಸರ್ಕಲ್, ಅಂಬಲಪಾಡಿ, ಬ್ರಹ್ಮಗಿರಿ ಮೂಲಕ ಅಜ್ಜರಕಾಡು ಕ್ರೀಡಾಂಗಣದಲ್ಲಿ ಸಮಾಪನಗೊಂಡಿತು.

ಭಾಗವಹಿಸಿದವರಿಗೆ ಕ್ರೀಡಾಂಗಣದಲ್ಲಿ ಜುಂಬಾ ಸೆಷನ್‌ಗಳನ್ನು ಆಯೋಜಿಸಲಾಗಿತ್ತು. 500ಕ್ಕೂ ಹೆಚ್ಚು ಜನರು ಸೈಕಲ್‌ನೊಂದಿಗೆ ಭಾಗವಹಿಸಿದ್ದರು. ಮಣಿಪಾಲ ಮಾಹೆ ಸಹಕುಲಪತಿ ಡಾ. ಪಿ.ಎಲ್. ಎನ್.ಜಿ. ರಾವ್, ಆರೋಗ್ಯ ವಿಜ್ಞಾನ, ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್‌ನ ಡೀನ್ ಡಾ. ಅರುಣ್ ಮಯ್ಯ, ಕೆಎಂಸಿ ಡೀನ್, ಡಾ. ಶರತ್ ಕೆ. ರಾವ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹ ನಿರ್ದೇಶಕ ಡಾ. ರೋಶನ್ ಶೆಟ್ಟಿ, ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ್ಣ, ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ, ಅಂತಃಸ್ರಾವಶಾಸ್ತ್ರ(ಎಂಡೋ ಕ್ರೈನಾಲಜಿ) ವಿಭಾಗದ ಮುಖ್ಯಸ್ಥ ಡಾ. ಸಹನಾ ಶೆಟ್ಟಿ ಉಪಸ್ಥಿತರಿದ್ದರು.

ಡಾ. ಸಹನಾ ಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ವಂದಿಸಿದರು.

ಕನ್ನಡಪ್ರಭ
ಸೋಮವಾರ 15.11.2021

# ವಿಶ್ವ ಮಧುಮೇಹ ದಿನಾಚರಣೆ: ಕೆಎಂಸಿಯಿಂದ ಸೈಕಲ್ ಜಾಥಾ

## 'ಮಧುಮೇಹ ಆರೈಕೆಯ ಸಾರ್ವತ್ರಿಕ ಲಭ್ಯತೆ, ಈಗ ಇಲ್ಲದಿದ್ದರೆ, ಯಾವಾಗ?' ಧ್ಯೇಯ ವಾಕ್ಯ

• **ಕನ್ನಡಪ್ರಭ ವಾರ್ತೆ** ಮಣಿಪಾಲ

ವಿಶ್ವ ಮಧುಮೇಹ ದಿನದಂಗವಾಗಿ ಭಾನುವಾರ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಂತಃಸ್ರಾವಶಾಸ್ತ್ರ ವಿಭಾಗವು ಸೈಕಲ್ ಜಾಥಾವನ್ನು ಆಯೋಜಿಸಿತ್ತು. 'ಮಧುಮೇಹ ಆರೈಕೆಯ ಸಾರ್ವತ್ರಿಕ ಲಭ್ಯತೆ, ಈಗ ಇಲ್ಲದಿದ್ದರೆ, ಯಾವಾಗ?' ಎಂಬುದು ಈ ವರ್ಷದ ವಿಶ್ವ ಮಧುಮೇಹ ದಿನ ಧ್ಯೇಯವಾಕ್ಯವಾಗಿತ್ತು.

ಮಾಹೆ ಮಣಿಪಾಲದ ಸಹಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್ ಅವರು ಕಸ್ತೂರ್ಬಾ ಆಸ್ಪತ್ರೆಯ ಹೊರರೋಗಿ ವಿಭಾಗದ ಮುಂಭಾಗದಲ್ಲಿ ಸೈಕಲ್ ಜಾಥಾಕ್ಕೆ ಚಾಲನೆ ನೀಡಿದರು. ಮಣಿಪಾಲದಿಂದ ಆರಂಭವಾದ ಜಾಥಾ ಸಿಂಡಿಕೇಟ್ ಸರ್ಕಲ್, ಸಿಟಿ ಬಸ್ ನಿಲ್ದಾಣ, ಬನ್ನಂಜೆ, ಕರಾವಳಿ ಸರ್ಕಲ್, ಅಂಬಲಪಾಡಿ, ಬ್ರಹ್ಮಗಿರಿ ಮೂಲಕ ಅಜ್ಜರಕಾಡು ಕ್ರೀಡಾಂಗಣದಲ್ಲಿ ಸಮಾಪನಗೊಂಡಿತು. 500ಕ್ಕೂ ಹೆಚ್ಚು ಮಂದಿ ಈ ಜಾಥಾದಲ್ಲಿ ಭಾಗವಹಿಸಿದ್ದರು.

ಅಜ್ಜರಕಾಡು ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಡಾ. ಎಚ್.ಎಸ್. ಬಲ್ಲಾಳ್ ಮಾತನಾಡಿ, ಮಧುಮೇಹ ಮತ್ತು ಅಧಿಕ ರಕ್ತದೊತ್ತಡಗಳು ಮೌನ ಕೊಲೆಗಾರರಾಗಿದ್ದು, ಸಾಮಾನ್ಯಜನರಿಗೆ ಇದರ ತೀವ್ರತೆ ತಿಳಿದಿರುವುದಿಲ್ಲ. ಶೇ.50ರಷ್ಟು ಜನರಲ್ಲಿ ಮಧುಮೇಹ ಆರಂಭಿಕ ಹಂತದಲ್ಲಿ ಪತ್ತೆ ಆಗುವುದಿಲ್ಲ. ಆದ್ದರಿಂದ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದರ ಅರಿವು ಮತ್ತು ರೋಗ ಪತ್ತೆ ಮಾಡುವುದು ಮುಖ್ಯವಾಗಿದೆ ಎಂದರು.

ಸಹಕುಲಪತಿ ಡಾ.ಪಿ.ಎಲ್.ಎನ್.ಜಿ. ರಾವ್, ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್‌ನ ಡೀನ್ ಡಾ. ಅರುಣ್ ಮಯ್ಯ, ಕೆ.ಎಂ.ಸಿ.ಯ ಡೀನ್ ಡಾ. ಶರತ್ ಕೆ. ರಾವ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹ ನಿರ್ದೇಶಕ ಡಾ. ರೋಶನ್ ಕುಮಾರ್ ಶೆಟ್ಟಿ, ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ್ಣ, ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಮತ್ತು ಅಂತಃಸ್ರಾವಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಸಹಾನಾ ಶೆಟ್ಟಿ ಇದ್ದರು.



ಸೈಕಲ್ ಜಾಥಾಕ್ಕೆ ಚಾಲನೆ ನೀಡಿ ಗಣ್ಯರು ಮಾತನಾಡಿದರು.

# ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಿಂದ ಮಧುಮೇಹ ದಿನದ ಅಂಗವಾಗಿ ಸೈಕಲ್ ಜಾಥಾ




ಮಣಿಪಾಲ, ನವೆಂಬರ್ ಅನ್ನು ಮಧುಮೇಹ ದಿನವನ್ನಾಗಿ ವಿಶ್ವಾದ್ಯಂತ ಆಚರಿಸಲಾಗುತ್ತದೆ. ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಂತಃಸ್ರಾವಶಾಸ್ತ್ರ (ಎಂಡೋ ಕ್ರೈ ನೋಲೊಜಿ) ವಿಭಾಗವು ಇದರ ಅಂಗವಾಗಿ ಸೈಕಲ್ ಜಾಥ ಕಾರ್ಯಕ್ರಮವನ್ನು ಆಯೋಜಿಸಿತ್ತು. ಮಧುಮೇಹ ಆರೈಕೆಯ ಸಾರ್ವತ್ರಿಕ ಲಭ್ಯತೆ , ಈಗ ಇಲ್ಲದಿದ್ದರೆ, ಯಾವಾಗ ? ಎಂಬುದು ಈ ವರ್ಷದ ಧ್ಯೇಯ ವಾಕ್ಯವಾಗಿದೆ. ಮಾಹೆ ಮಣಿಪಾಲದ ಸಹ ಕುಲಾಧಿಪತಿಗಳಾದ ಡಾ. ಎಚ್.ಎಸ್.ಬಲ್ಲಾಲ್ ಅವರು ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಹೊರರೋಗಿ ವಿಭಾಗದ ಮುಂದೆ ಸೈಕಲ್ ಜಾಥಕ್ಕೆ ಚಾಲನೆ ನೀಡಿದರು. ಮಣಿಪಾಲದಿಂದ ಆರಂಭವಾದ ಜಾಥವು , ಸಿಂಡಿಕೇಟ್ ಸರ್ಕಲ್, ಸಿಟಿ ಬಸ್ ನಿಲ್ದಾಣ, ಬನ್ನಂಜೆ, ಕರಾವಳಿ ಸರ್ಕಲ್, ಅಂಬಲಪಾಡಿ, ಬ್ರಹ್ಮಗಿರಿ ಮೂಲಕ ಅಜ್ಜರಕಾಡು ಕ್ರೀಡಾಂಗಣದಲ್ಲಿ ಸಮಾಪನಗೊಂಡಿತು. ಭಾಗವಹಿಸಿದವರಿಗೆ ಕ್ರೀಡಾಂಗಣದಲ್ಲಿ ಜುಂಬಾ ಸೆಷನ್‌ಗಳನ್ನು ಆಯೋಜಿಸಲಾಗಿತ್ತು. 500 ಕ್ಕೂ ಹೆಚ್ಚು ಜನರು ಸೈಕಲ್ ನೊಂದಿಗೆ ಭಾಗವಹಿಸಿದ್ದರ ತದನಂತರ ಅಜ್ಜರಕಾಡು ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಡಾ. ಎಚ್ ಎಸ್ ಬಲ್ಲಾಳ್, ಸಹ ಕುಲಾಧಿಪತಿಗಳು ಮಾಹೆ ಮಣಿಪಾಲ, ಡಾ. ಪಿ ಎಲ್ ಎನ್ ಜಿ ರಾವ್ , ಸಹ ಕುಲಪತಿ, ಆರೋಗ್ಯವಿಜ್ಞಾನ , ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ ನ ಡೀನ್ ಡಾ. ಅರುಣ್ ಮಯ್ಯ , ಕೆ ಎಂ ಸಿ ಡೀನ್ , ಡಾ. ಶರತ್ ಕೆ ರಾವ್ , ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹ ನಿರ್ದೇಶಕರಾದ ಡಾ. ರೋಶನ್ ಶೆಟ್ಟಿ , ಮುಖ್ಯ ನಿರ್ವಹಣಾಧಿಕಾರಿಗಳಾದ ಶ್ರೀ ಸಿ ಜಿ ಮುತ್ತಣ್ಣ , ವೈದ್ಯಕೀಯ ಅಧೀಕ್ಷಕರಾದ ಡಾ.ಅವಿನಾಶ್ ಶೆಟ್ಟಿ ಮತ್ತು ಅಂತಃಸ್ರಾವಶಾಸ್ತ್ರ (ಎಂಡೋ ಕ್ರೈ ನೋಲೊಜಿ) ವಿಭಾಗದ ಮುಖ್ಯಸ್ಥರಾದ ಡಾ.ಸಹನಾ ಶೆಟ್ಟಿ ಅವರು ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಡಾ ಬಲ್ಲಾಳ್ ಅವರು, "ಮಧುಮೇಹ ಮತ್ತು ಅಧಿಕ ರಕ್ತದೊತ್ತಡವು ಜೀವನದ ಮೌನ ಕೊಲೆಗಾರರಾಗಿದ್ದು, ಸಾಮಾನ್ಯ ಜನರಿಗೆ ರೋಗದ ತೀವ್ರತೆ ಅರ್ಥ ವಾಗುವುದಿಲ್ಲ . ಬಹಳ ಮುಖ್ಯವಾಗಿ ಶೇಕಡಾ 50ರಷ್ಟು ಮಧುಮೇಹ ರೋಗಿಗಳಿಗೆ ಆರಂಭಿಕ ಹಂತದಲ್ಲಿ ಪತ್ತೆ ಆಗಿರುವುದಿಲ್ಲ. ಮಧುಮೇಹವು ದೇಹದ ಎಲ್ಲಾ ಭಾಗಗಳ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಆರಂಭಿಕ ಹಂತದಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದರ ಅರಿವು ಮತ್ತು ರೋಗ ಪತ್ತೆ ನಡೆಯುವುದು ಮುಖ್ಯವಾಗಿದೆ", ಎಂದರು ಡಾ. ಪಿ ಎಲ್ ಎನ್ ಜಿ ರಾವ್ ಮಾತನಾಡುತ್ತಾ , ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಜನರಲ್ಲಿ ಜಾಗೃತಿ ಮೂಡಿಸುವುದು, ಜೀವನಶೈಲಿ ರೋಗದಿಂದ ತಡೆಗಟ್ಟಲು ಇದು ಮುಖ್ಯವಾಗಿದೆ, ಈ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ನಾನು ತಂಡವನ್ನು ಅಭಿನಂದಿಸುತ್ತೇನೆ" ಎಂದರು .ಡಾ. ಅರುಣ್ ಮಯ್ಯ ಅವರು, "ಮಧುಮೇಹ ರೋಗಿಗಳಿಗೆ ಪಾದದ ತಪಾಸಣೆ ಕೂಡ ಬಹಳ ಮುಖ್ಯ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ, ಮಧುಮೇಹ ಪಾದದ ಆರಂಭಿಕ ತಪಾಸಣೆ, ಮೌಲ್ಯಮಾಪನ ಮತ್ತು ನಿರ್ವಹಣೆಗೆ ವಿಶೇಷ ಘಟಕವಿದೆ. ಮಣಿಪಾಲದ ಮಧುಮೇಹ ಪಾದದ ಆರೈಕೆ ಮತ್ತು ಸಂಶೋಧನಾ ವಿಭಾಗದಲ್ಲಿ ವಿಶ್ವ ಮಧುಮೇಹ ದಿನಾಚರಣೆಯ ಅಂಗವಾಗಿ ನವೆಂಬರ್ 15 ರಿಂದ 19ರ ವರೆಗೆ ಮಧುಮೇಹಿಗಳಿಗಾಗಿ ಉಚಿತ ಪಾದದ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದೆ", ಎಂದರು ಡಾ ರೋಶನ್ ಶೆಟ್ಟಿ ಅವರು "ಈ ಕ್ರೀಡಾಂಗಣಕ್ಕೆ ಬಹಳಷ್ಟು ಜನರು ಬೇರೆ ಬೇರೆ ದೈಹಿಕ ಚಟುವಟಿಕೆಗಳನ್ನು ಆಡಲು ಬರುತ್ತಾರೆ. ಇದರಲ್ಲಿ ಹೆಚ್ಚಿನವರು 40 ವರ್ಷ ದಾಟಿದವರು. ಆದರೆ ಮಧುಮೇಹ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ಈಗ ತುಂಬಾ ಸಣ್ಣ ವಯಸ್ಸಿನಲ್ಲಿ ಕಂಡು ಬರುತ್ತಿವೆ. ಇದಕ್ಕೆ ಕಾರಣ ಮಕ್ಕಳಿಗೆ ಮತ್ತು ಯುವಕರಿಗೆ ದೈಹಿಕ ಚಟುವಟಿಕೆಗಳು ಸಿಗದೇ ಇರುವುದು. ಆದ್ದರಿಂದ ಸಮಯ ಸಿಕ್ಕಾಗಲೆಲ್ಲಾ ಮಕ್ಕಳು ಮತ್ತು ಯುವಕರು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು", ಎಂದರು ಡಾ.ಸಹನಾ ಶೆಟ್ಟಿ ಅವರು ಕಾರ್ಯಕ್ರಮದ ಬಗ್ಗೆ ಅವಲೋಕನ ನೀಡಿದರು ಮತ್ತು ಡಾ. ಅವಿನಾಶ್ ಶೆಟ್ಟಿ ವಂದಿಸಿದರು.

ಜನಮನದ ಸಾರಥಿ ವಾರ್ತಾ ಭಾರತಿ

# ಮಣಿಪಾಲದಿಂದ ಉಡುಪಿವರೆಗೆ ಮಧುಮೇಹ ಜಾಗೃತಿಗಾಗಿ ಸೈಕಲ್ ಜಾಥಾ




ಮಣಿಪಾಲ, ನ.14: ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಎಂಡೋ ಕ್ರೈನೊಲೊಜಿ ವಿಭಾಗದ ವತಿಯಿಂದ ಮಧುಮೇಹ ದಿನಾಚರಣೆ ಪ್ರಯುಕ್ತ ಮಣಿಪಾಲದಿಂದ ಉಡುಪಿಯವರೆಗೆ ಸೈಕಲ್ ಜಾಥಾವನ್ನು ರವಿವಾರ ಆಯೋಜಿಸಲಾಗಿತ್ತು.

ಆಸ್ಪತ್ರೆಯ ಹೊರರೋಗಿ ವಿಭಾಗದ ಮುಂದೆ ಮಣಿಪಾಲ ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಸೈಕಲ್ ಜಾಥಾಕ್ಕೆ ಚಾಲನೆ ನೀಡಿದರು. ಮಣಿಪಾಲದಿಂದ ಆರಂಭವಾದ ಜಾಥಾವು, ಸಿಂಡಿಕೇಟ್ ಸರ್ಕಲ್, ಸಿಟಿ ಬಸ್ ನಿಲ್ದಾಣ, ಬನ್ನಂಜೆ, ಕರಾವಳಿ ಸರ್ಕಲ್, ಅಂಬಲಪಾಡಿ, ಬ್ರಹ್ಮಗಿರಿ ಮೂಲಕ ಅಜ್ಜರಕಾಡು ಕ್ರೀಡಾಂಗಣದಲ್ಲಿ ಸಮಾಪನಗೊಂಡಿತು. 500ಕ್ಕೂ ಹೆಚ್ಚು ಮಂದಿ ಸೈಕಲ್‌ಜಾಥಾದಲ್ಲಿ ಭಾಗವಹಿಸಿದ್ದರು.

ಅಜ್ಜರಕಾಡು ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಡಾ.ಎಚ್.ಎಚ್.ಬಲ್ಲಾಳ್ ಮಾತನಾಡಿ, ಮಧುಮೇಹ ಮತ್ತು ಅಧಿಕ ರಕ್ತದೊತ್ತಡವು ಜೀವನದ ಮೌನ ಕೊಲೆಗಾರರಾಗಿದ್ದು, ಸಾಮಾನ್ಯ ಜನರಿಗೆ ರೋಗದ ತೀವ್ರತೆ ಅರ್ಥವಾಗುವುದಿಲ್ಲ. ಬಹಳ ಮುಖ್ಯವಾಗಿ ಶೇ.50ರಷ್ಟು ಮಧುಮೇಹ ರೋಗಿಗಳಿಗೆ ಆರಂಭಿಕ ಹಂತದಲ್ಲಿ ಪತ್ತೆ ಆಗಿರುವುದಿಲ್ಲ. ಮಧುಮೇಹವು ದೇಹದ ಎಲ್ಲಾ ಭಾಗಗಳ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಆರಂಭಿಕ ಹಂತದಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದರ ಅರಿವು ಮತ್ತು ರೋಗ ಪತ್ತೆ ನಡೆಯುವುದು ಮುಖ್ಯವಾಗಿದೆ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ರೋಶನ್ ಶೆಟ್ಟಿ ಮಾತನಾಡಿ, ಮಧುಮೇಹ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ಈಗ ತುಂಬಾ ಸಣ್ಣ ಪ್ರಾಯದವರಲ್ಲಿ ಕಂಡು ಬರುತ್ತಿವೆ. ಇದಕ್ಕೆ ಕಾರಣ ಮಕ್ಕಳಿಗೆ ಮತ್ತು ಯುವಕರಿಗೆ ದೈಹಿಕ ಚಟುವಟಿಕೆಗಳು ಸಿಗದೆ ಇರುವುದು. ಆದ್ದರಿಂದ ಸಮಯ ಸಿಕ್ಕಾಗಲೆಲ್ಲಾ ಮಕ್ಕಳು ಮತ್ತು ಯುವಕರು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಮಣಿಪಾಲ ಹೆಲ್ತ್ ಸಯನ್ಸ್‌ನ ಸಹ ಕುಲಪತಿ ಡಾ.ಪಿ.ಎಲ್. ಎನ್.ಜಿ.ರಾವ್, ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್‌ನ ಡೀನ್ ಡಾ.ಅರುಣ್ ಮಯ್ಯ, ಕೆಎಂಸಿ ಡೀನ್ ಡಾ.ಶರತ್ ರಾವ್, ಕೆಎಂಸಿ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ ಉಪಸ್ಥಿತರಿದ್ದರು.

ಕೆಎಂಸಿ ಎಂಡೋ ಕ್ರೈನೊಲೊಜಿ ವಿಭಾಗದ ಮುಖ್ಯಸ್ಥೆ ಡಾ.ಸಹಾನಾ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ವಂದಿಸಿದರು.

Mangalore Edition
Nov 15, 2021 Page No.2

**Other Links:**

- Udupi Times : https://udupitimes.com/udupi-times-6817/
- Karavali Xpress: https://karavalixpress.com/health/km-8/
- Daijiworld : https://daijiworld.com/news/newsDisplay?newsID=893623
- Namma Udupi Bulletin : https://daijiworld.com/news/newsDisplay?newsID=893623
- Suddi Kirana : https://suddikirana.com/sangati/worl-diabetic-day-jaatha/
- https://bit.ly/30wwsDn
- https://wp.me/paO4Ig-3mL1